ಓಎಸ್ ನಂ.207|2020
ಡಿ ಡಬ್ಲ್ಯೂ-1

ದಿನಾಂಕಃ **25.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪ್ರತಿವಾದಿಯ ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ ಸಿ ಆರ್ ವಕೀಲರಿಂದಃ

ನನ್ನ ಮುಂದುವರಿದ ಮುಖ್ಯ ವಿಚಾರಣೆಯ ಸಲುವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು, ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ನನ್ನ ಕುಟುಂಬ ವಂಶವೃಕ್ಷ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ದಿಃ05.11.2008 ರ ನೊಂದಾಯಿತ ಕ್ರಯಪತ್ರದ ಮೂಲ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

ದಿಃ15.02.2013 ರ ನೊಂದಾಯಿತ ಕ್ರಯಪತ್ರದ ದೃಡಿಕೃತ ನಕಲನ್ನು ಹಾಗೂ ಸದರಿ ದಾಖಲೆಯನ್ನು ತುಮಕೂರು ಉಪನೊಂದಣಾಧಿಕಾರಿಯವರು ಕರ್ನಾಟಕ ಮುದ್ರಾಂಕ ಅಧಿನಿಯಮ ಕಲಂ.10 ರ ಪ್ರಕಾರ ದೃಡೀಕರಿಸಿ ನೀಡಿದ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ-3 ಮತ್ತು ನಿಡಿ-3(ಎ) ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನಮೂನೆ-9 ಮತ್ತು 11 ನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ-4 ಮತ್ತು ನಿಡಿ-5 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂದಿಸಿದಂತೆ 2020-21 ರ ಅವಧಿಯ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ತಾತ್ಕಲಿಕ ವಿದ್ಯುತ್ ಸಂಪರ್ಕ ಪಡೆದ ಬಗ್ಗೆ ಬೆಸ್ಕಾಂ ನಿಂದ ನೀಡಿದ ಐದು ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-7 ರಿಂದ ನಿಡಿ-11 ಎಂದು ಗುರುತಿಸಲಾಯಿತು.

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-2.pdf
www.ecourtsindia.com

ಓಎಸ್ ನಂ.207|2020
ಡಿ ಡಬ್ಲ್ಯೂ-1

ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಏಳು ವಿದ್ಯುಚ್ಚಕ್ತಿ ಬಿಲ್ ಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ12 ರಿಂದ ನಿಡಿ-18 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಗ್ಯಾಸ್ ಸಂಪರ್ಕ ಪಡೆದ ಬಗ್ಗೆ ಎರಡು ಗ್ಯಾಸ್ ಬಿಲ್ ಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ19 ಮತ್ತು ನಿಡಿ-20 ಎಂದು ಗುರುತಿಸಲಾಯಿತು.

ವಾಸಸ್ಥಳ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-21 ಎಂದು ಗುರುತಿಸಲಾಯಿತು.

ಎರಡು ಕುಟುಂಬ ಪಡಿತರ ಚೀಟಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ22 ಮತ್ತು ನಿಡಿ-23 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂದಿಸಿದಂತೆ ತೆರಿಗೆ ಪಾವತಿ ರಸೀದಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-24 ಎಂದು ಗುರುತಿಸಲಾಯಿತು.

ಸ.ನಂ. 5/4 ರ ಸ್ವತ್ತಿಗೆ ಸಂಬಂದಿಸಿದಂತೆ ಆರ್ ಟಿ ಸಿ ಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ಈ ದಾವಾ ಸ್ವತ್ತಿಗೆ ಸಂಬಂದಿಸಿಲ್ಲವಾದ್ದರಿಂದ ವಾದಿ ಪರ ವಕೀಲರು ನಿಶಾನೆಯನ್ನಾಗಿ ಗುರುತಿಸಲು ತಕರಾರು ಸಲ್ಲಿಸಿದ್ದು ತಕರಾರಿಗೆ ಒಳಪಟ್ಟು ಅದನ್ನು ನಿಡಿ-25 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಬೇಕಾಗಿ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಎರಡನೇ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ತುಮಕೂರು.

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-2.pdf

www.ecourtsindia.com

ಡಿ ಡಬ್ಲ್ಯೂ-1

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-2.pdf

www.ecourtsindia.com

ಓಎಸ್ ನಂ.207|2020
ಡಿ ಡಬ್ಲ್ಯೂ-1

ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ತುಮಕೂರು. C/c

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-2.pdf

www.ecourtsindia.com